## ನಗರದ ಇತಿಹಾಸ

ಹೊಂಗ್ ಫು ರಾಜನ ಮಗ ಝು ಧ ರಾಜನಾದಾಗ ಬೀಜಿಂಗ್ ಅನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಪ್ರವೇಶವಿಲ್ಲದ ನಗರದ ಕಾಮಗಾರಿಯನ್ನು 1406ರಲ್ಲಿ ಶುರು ಮಾಡಿದ. ಸುಮಾರು 15 ವರ್ಷಗಳ ನಿರ್ಮಾಣ ಕಾರ್ಯದಲ್ಲಿ ಒಂದು ಲಕ್ಷ ನುರಿತ ಕುಶಲ ಕಲೆಗಾರರು ಹಾಗೂ 10 ಲಕ್ಷಕ್ಕೂ ಅಧಿಕ ಕಟ್ಟಡ ಕೆಲಸಗಾರರಿದ್ದರಂತೆ. ಈ ನಗರವು 1420ರಿಂದ 1644ವರೆಗೆ ಮಿಂಗ್ ಮನೆತನದ ಆಡಳಿತದ ಕೇಂದ್ರವಾಗಿತ್ತು, ಮುಂದೆ ಆಡಳಿತ ಕ್ವಿಂಗ್ ಮನೆತನದ ಕೈ ಸೇರಿತು. ಒಟ್ಟು 24 ರಾಜರ ಆಡಳಿತದ ಕೇಂದ್ರವಾಗಿತ್ತು ಈ ನಗರ. 1860ರಲ್ಲಿ ನಗರದ ಆಡಳಿತ ಆಂಗ್ಲೊ– ಫ್ರೆಂಚರ ಕೈ ಸೇರಿತು. 1914ರಲ್ಲಿ ನಗರದ ಮುಂದಿನ ಭಾಗವು ವಸ್ತು ಸಂಗ್ರಹಾಲಯವಾಯಿತು. ಸುಮಾರು 500 ವರ್ಷಗಳ ಇತಿಹಾಸವಿರುವ ನಗರವನ್ನು ಹಲವು ಸಲ ನವೀಕರಿಸಲಾಗಿದೆ.

ನಗರದೊಳಗಡೆ ಪ್ರವೇಶಿಸಲು ದಕ್ಷಿಣ ದಿಕ್ಕಿನಲ್ಲಿರುವ ಮುಖ್ಯದ್ವಾರಕ್ಕೆ ಬರಬೇಕು. ಬೀಜಿಂಗ್‌ನ ಟಿಯನನ್ಮೆನ್ ಮತ್ತು ಚೀನಾದ ನಾಯಕ ಮಾವೋ ಫೊಟೊ ಇರುವ ಟಿಯನನ್ಮೆನ್ ಗೇಟಿನೊಳಗಡೆ ಬಂದರೆ ಎದುರಾಗುವುದೇ ನಗರದ ಮಖ್ಯದ್ವಾರ ಮೆರಿಡಿಯನ್ ಗೇಟ್. ನಗರದ ಸುತ್ತ ಸುಮಾರು 52 ಮೀಟರ್ ಅಗಲದ ಹಾಗೂ 6 ಮೀಟರ್ ಆಳದ ಕಾಲುವೆಯಿದೆ.

ಈ ನಗರದ ಸುತ್ತ ಸುಮಾರು 10 ಮಿಟರ್ ಎತ್ತರ, 3,400 ಮಿಟರ್ ಉದ್ದದ ಕಾಂಪೌಂಡ್ ಗೋಡೆಯಿದ್ದು, ನಾಲ್ಕು ದಿಕ್ಕಿನಲ್ಲಿ ನಿರೀಕ್ಷಣ ಗೋಪುರಗಳಿವೆ. ಬಹು ದೂರದಿಂದಲೇ ಈ ಗೋಪುರಗಳು ಎದ್ದು ಕಾಣಿಸುತ್ತವೆ. ಕಾಂಪೌಂಡನ್ನು ಸುಣ್ಣದ ಕಲ್ಲು, ಮೊಟ್ಟೆಯ ಬಿಳಿ ಭಾಗ, ಅಂಟು ಅಕ್ಕಿಯಿಂದ ಕಟ್ಟಿದ್ದರಂತೆ. ಕಾಂಪೌಂಡ್‌ನಲ್ಲಿ ನಾಲ್ಕು ದಿಕ್ಕಿನಲ್ಲೂ ಗೇಟುಗಳಿದ್ದು, ದಕ್ಷಿಣ ದಿಕ್ಕಿನಲ್ಲಿರುವ ಮೆರಿಡಿಯನ್ ಗೇಟೇ ಮುಖ್ಯದ್ವಾರ. ಇದು ಸ್ವತಂತ್ರ ಚೀನಾದ ಅಧಿಕೃತ ಚಿಹ್ನೆಯಾಗಿ ಗುರುತಿಸಲ್ಪಟ್ಟಿದೆ.

## ಈ ನಗರದಲ್ಲಿ ಏನೇನಿದೆ?

ದರ್ಬಾರ ಕೋಣೆಗಳು, ಮೆರವಣಿಗೆ ಮಾರ್ಗ, ದೊಡ್ಡ ದೊಡ್ಡ ಅಂಗಳಗಳು, ಅಳಿದ ವಂಶಸ್ಥರಿಗಾಗಿ ಕಟ್ಟಿದ ದೇವಾಲಯ, ರಾಜ, ರಾಣಿ, ರಾಜಕುಮಾರರ ಪ್ರತ್ಯೇಕ ಅರಮನೆಗಳು, ಮೇಲ್ವಿಚಾರಕರು, ಸೇವಕರ ಮನೆಗಳು, ದೇವಾಲಯಗಳು (ಬೌದ್ಧಧರ್ಮ, ಲಾಮ ಧರ್ಮ, ತವೊ ಧರ್ಮದವರಿಗಾಗಿ), ಉದ್ಯಾನವನಗಳಿವೆ. ಈ ನಗರವನ್ನು 'ಫೆಂಗ್ ಶುಯಿ' (ಗಾಳಿ ನೀರು) ಕಲೆಯನ್ನು ಅನುಸರಿಸಿ ಕಟ್ಟಲಾಯಿತು. ಚೀನಾದ ಸಂಪ್ರದಾಯದಂತೆ ಐದು ಬಣ್ಣಗಳನ್ನು ಸಾಕಸ್ಟು ಉಪಯೋಗಿಸಲಾಗಿದೆ, ಮಾಳಿಗೆಗೆ ಬಿಳಿ ಮಾರ್ಬಲ್, ಕಟ್ಟಡದ ದಾರಿಗಳು ಕಪ್ಪು, ಕಟ್ಟಡ ಹಾಗೂ ಅರಮನೆಯ ಗೊಡೆಗಳು ಕೆಂಪು, ಮಾಡುಗಳು ಹಳದಿ ಬಣ್ಣದ್ದಾಗಿದ್ದು, ಆಕಾಶದ ನೀಲಿ ಬಣ್ಣವು ಐದನೆಯ ಬಣ್ಣ. ನೇರಳೆ ಬಣ್ಣ ರಾಜನ ಅರಮನೆಗೆ ಬಳಿಯಲಾಗಿದೆ. ಇದು ಸ್ವರ್ಗದ ಮಧ್ಯದಲ್ಲಿರುವ ನಕ್ಷತ್ರದಂತೆ ಎಂದು ಚೀನಾದವರ ನಂಬಿಕೆ, ಆದರೆ ರಾಜಕುಮಾರನ ಅರಮನೆಯ ಮಾಡಿಗೆ ಮಾತ್ರ ಹಸಿರು ಬಣ್ಣ, ಹಸಿರು ಬಣ್ಣ ಮರ ಗಿಡಗಳ ಬಣ್ಣವಾಗಿದ್ದು, ಅದು ವೃದ್ಧಿಯನ್ನು ಸಂಕೇತಿಸುತ್ತದೆ. ವಾಚನಾಲಯದ ಮಾಡಿನ ಬಣ್ಣ ಕಪ್ಪು. ಕಪ್ಪು ನೀರಿನ ಸಂಕೇತವಾಗಿದ್ದು, ಇದು ಬೆಂಕಿಯಿಂದ ದೂರವಿಡುತ್ತದೆಂಬ ನಂಬಿಕೆ. ಮಾಡಿನ ನಾಲ್ಕೂ ಅಂಚಿನಲ್ಲಿ ಚಿಕ್ಕ ಪ್ರಾಣಿ, ಪಕ್ಷಿ, ಡ್ರ್ಯಾಗನ್ನಿನ ಮೂರ್ತಿಗಳಿವೆ.

ಇಡೀ ನಗರವನ್ನು ಎರಡು ಭಾಗವಾಗಿ ಕಟ್ಟಿದ್ದಾರೆ. ನಗರದ ಮುಂದಿನ ಭಾಗ 'ಹೊರ ಭಾಗ'ವಾಗಿದೆ. ಮೆರಿಡಿಯನ್ ಗೇಟ್ ದಾಟುತಿದ್ದಂತೆ ಎದುರಾಗುವುದು ಅಂಗಳ. ಅಂಗಳದಲ್ಲಿ 'ಚಿನ್ನದ ನದಿ' ಯ ಮೇಲೆ ಕಟ್ಟಿದ 5 ಸೇತುವೆಗಳಿವೆ. ನದಿಯ ನೀರನ್ನು ನಗರಕ್ಕೆ ಬೆಂಕಿ ಬಿದ್ದರೆ ಆರಿಸಲು ಉಪಯೋಗವಾಗುವಂತೆ ನಗರವನ್ನು ಕಟ್ಟಿದ್ದಾರೆ.

ನಂತರ ಎದುರಾಗುವುದು ಸುಪ್ರೀಮ್ ಹರ್ಮನಿಯಂ ಗೇಟು ಮತ್ತು ಗೇಟು ದಾಟುತಿದ್ದಂತೆ ಮತ್ತೆ ಸಿಗುವುದು ಮರ ಗಿಡಗಳಿಲ್ಲದ ದೊಡ್ಡ ಅಂಗಳ ಮತ್ತು ಮೂರು ಪ್ರತ್ಯೇಕ ದೊಡ್ಡ ದರ್ಬಾರ್ ಕೋಣೆಗಳು. ಇದು ರಾಜನ ವ್ಯಾವಹಾರಿಕ ದರ್ಬಾರ್ ಆಗಿದ್ದು, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಉತ್ಸವಗಳನ್ನು ಈ ಭಾಗದಲ್ಲಿಯೇ ನಡೆಸುತ್ತಿದ್ದರು. ರಾಜಕುಮಾರ, ರಾಜಕುಮಾರಿಯರ ವಿವಾಹ, ವಿದೇಶಿ ರಾಜರ ಮತ್ತು ಉನ್ನತ ಅಧಿಕಾರಿಗಳ ಸ್ವಾಗತ ಮತ್ತು ಔತಣಕೂಟ, ಹೊಸ ವರ್ಷ ಮತ್ತು ಹಬ್ಬಗಳ ಆಚರಣೆಗಳೆಲ್ಲ ಮೂರನೆಯ ದರ್ಬಾರ್ ಕೋಣೆಯಲ್ಲಿ ನಡೆಯುತ್ತಿದ್ದವಂತೆ. ಸುಪ್ರೀಂ ಹರ್ಮನಿಯಂ ಗೇಟಿನ ಹೊರ ಭಾಗದಲ್ಲಿ ಎರಡೂ ಕಡೆಯಲ್ಲಿ ಎರಡು ದೊಡ್ಡ ಕಂಚಿನ ಸಿಂಹದ ವಿಗ್ರಹಗಳನ್ನು ಕೂರಿಸಿದ್ದಾರೆ.

ನಗರದ ಹೊರ ಭಾಗದಿಂದ ಒಳಭಾಗಕ್ಕೆ ಹೊರಟರೆ ಮಧ್ಯದಲ್ಲಿರುವುದು ಮಾರ್ಬಲ್ ಕಲ್ಲಿನ ಕೆತ್ತನೆಗಳು. ಕೆತ್ತನೆಯ ಎರಡೂ ಬದಿಯಲ್ಲಿ ಮೆಟ್ಟಿಲುಗಳು, ಮಾರ್ಬಲ್ ಕೆತ್ತನೆಯಲ್ಲಿ ಹೆಚ್ಚಾಗಿ ಡ್ರ್ಯಾಗನ್ ಚಿತ್ರ ಕಂಡು ಬರುತ್ತದೆ.

ನಗರದ ಒಳಭಾಗಕ್ಕೆ ಸಿಗುವುದು 'ಸೆಲೆಸ್ಟಲ್ ಪ್ಯುರಿಟಿ' ಗೇಟ್. ಗೇಟಿನ



ಮೆರಿಡಿಯನ್ ಗೇಟ್